INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -4, July--August, 2024,
PageNo,01- 12
Peer -Reviewed, Refereed Journal

# ವಚನಗಳಲ್ಲಿ ಸತಿ ಪತಿ ಭಾವ

**ರವಿಕುಮಾರ.ಡಿ.**[1]

ಶರಣಸತಿ ಲಿಂಗಪತಿ ಭಾವ ಹನ್ನೆರಡನೆಯ ಶತಮಾನದ ವಚನಕಾರರು, ವಚನಕಾರ್ತಿಯರಲ್ಲಿ, ಹಾಗೆಯೇ ಮುಂದುವರಿದ ವಚನ ಸಾಹಿತ್ಯ ಪರಂಪರೆಯಲ್ಲಿ ಭಕ್ತಿಯ ಆಧಿಕ್ಯ, ಅನನ್ಯತೆಯ ಒಂದು ರೂಪಾಗಿ ಗೋಚರಿಸಿದೆ ಎಂಬುದನ್ನು ನೋಡುತ್ತೇವೆ. ಅಕ್ಕಮಹಾದೇವಿ, ಬಸವಣ್ಣ, ಸಿದ್ಧರಾಮಯ್ಯ, ಗಜೇಶ ಮಸಣಯ್ಯ, ಉರಿಲಿಂಗದೇವರು ಇತ್ಯಾದಿ ವಚನಕಾರರ ವಚನಗಳಲ್ಲಿ ಶರಣಸತಿ ಲಿಂಗಪತಿ ಭಾಷೆ ಸ್ಪಷ್ಟವಾಗಿ, ಅಧಿಕವಾಗಿ ಕಂಡುಬಂದರೆ ಇನ್ನು ಕೆಲವು ವಚನಕಾರರ ವಚನಗಳಲ್ಲಿ ಸತಿಪತಿಭಾವ ಕ್ವಚಿತ್ತಾಗಿ ಕಾಣಿಸಿಕೊಳ್ಳುತ್ತದೆ. ಕಡಿಮೆಯ ಸಂಖ್ಯೆಯಲ್ಲಿ ಕಾಣಿಸಿಕೊಂಡರೂ ಅಸ್ಪಷ್ಟತೆಗೆ ಮಾತ್ರ ಅವಕಾಶವಾಗುವುದಿಲ್ಲ ಎಂಬುದನ್ನು ಗಮನಿಸಬಹುದು. ವಚನಕಾರರಿಗೆ 'ವಿಶ್ವವೆಲ್ಲಾ ಪಶುವು, ಶಿವನೊಬ್ಬನೇ ಪತಿ, ಬೇರೊಬ್ಬ ಪತಿಯಿಲ್ಲ" (ಅಗ್ಘವಣಿ ಹೊನ್ನಯ್ಯ), 'ವಿಶ್ವವೆಲ್ಲವೂ ಪಶು, ಶಿವನೊಬ್ಬನೇ ಪತಿ, ಸರ್ವವೆಲ್ಲವೂ ಶಕ್ತಿರೂಪು, ಶಿವನೊಬ್ಬನೇ ಪುರುಷನು... ' (ಉರಿಲಿಂಗಪೆದ್ದಿ) ಆಗಿ ಸತಿಪತಿಭಾವ ವಿಸ್ತಾರವಾಗಿ ತೆರೆದುಕೊಂಡಿದೆ. ಇಂಥ ವಿಸ್ತಾರನೆಲೆಯಲ್ಲಿ ವಚನಕಾರರು ತಮ್ಮನ್ನು ಸತಿರೂಪಾಗಿ ಲಿಂಗವನ್ನು ಪತಿರೂಪಾಗಿ ಅರ್ಥೈಸಿ, ಅನುಭವಿಸಿ, ಅನುಭಾವದ ಪರಮ ಸೀಮೆಯನ್ನು ತಲುಪುವ ಸಾಧಕರುಗಳಾಗಿಯೇ ಗೋಚರಿಸುತ್ತಾರೆ. ಸತಿಪತಿ ಭಾವವನ್ನು ಅಖಂಡವಾಗಿ ಒಪ್ಪಿ ಮುನ್ನಡೆದ ವಚನಕಾರರು, ಆ ಭಾವಕ್ಕೆ ಹೊಸ ವ್ಯಾಖ್ಯಾನ, ವಿಶ್ಲೇಷಣೆ ನೀಡುವ ವಚನಕಾರರು, ಆ ಭಾವವನ್ನೇ ತಮ್ಮ ತತ್ತ್ವ, ಸಿದ್ಧಾಂತ, ಆಧ್ಯಾತ್ಮಿಕ ಅರಿವುಗಳ ಮೂಲಕ ನಿರಾಕರಿಸುವ ವಚನಕಾರರು ವಚನ ಪರಂಪರೆಯಲ್ಲಿ ಕಾಣಲು ಸಿಗುತ್ತಾರೆ.

ಸತಿ–ಪತಿ ಭಾವ ಶರಣರ ಹೊಸ ಚಿಂತನೆ. ಗಂಡಿರಲಿ–ಹೆಣ್ಣಿರಲಿ ತಾನು ಸತಿಯೆಂದು ಭಾವಿಸುವುದು, ದೇವರನ್ನು, ದೈವವನ್ನು ಪತಿಯೆಂದು ಭಾವಿಸುವುದು. ದೇವರು–ದೈವವೆಂದರೆ ಸಮಾಜ. ತನಗಿಂತ ಸಮಾಜ ದೊಡ್ಡದು, ತಾನಿರುವುದು ಸಮಾಜದ ಜನಸಮುದಾಯದ ಬೆಳವಣಿಗೆಗೇ ಹೊರತು,

---

[1].**ಸಂಶೋಧಕರು,ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು**

ಅದರ ನಾಶಕ್ಕಲ್ಲವೆಂದು ತಿಳಿಸುವ ತತ್ವವೇ ಸತಿ–ಪತಿ ತತ್ವ. ಇಲ್ಲಿ ಮಧುರ ಭಕ್ತಿಯಿದೆ ; ಸಮರ್ಪಣಾ ಭಾವವಿದೆ. **'ಶರಣಸತಿ'** ಎಂದರೆ 'ಸತಿಯಾದಾಗಲೇ ಶರಣನಾಗಲು ಸಾಧ್ಯವೆಂಬುದು ಹೊಸ ಚಿಂತನೆಯಾಗಿದೆ. ಶಿವನು, ಅರ್ಧನಾರೀಶ್ವರ. ಈ ಅರ್ಧನಾರೀಶ್ವರ ಪರಿಕಲ್ಪನೆಯೆಂದರೆ, ಪ್ರತಿಯೊಂದು ಜೀವಿಯೂ ಅರ್ಧನಾರಿ–ಅರ್ಧಪುರುಷ ಇರುತ್ತದೆ. ಗಂಡಿನಲ್ಲಿ ಹೆಣ್ಣಿನ ಅಂತಃಕರಣ, ಹೆಣ್ಣಿನಲ್ಲಿ ಗಂಡಿನ ಪರಾಕ್ರಮ ಎರಡೂ ಇರುತ್ತವೆಂದು ಅರ್ಧನಾರೀಶ್ವರ ಪರಿಕಲ್ಪನೆ ಹೇಳುತ್ತದೆ. ಮನುಷ್ಯ ಅರ್ಧ ಹೆಣ್ಣು – ಅರ್ಧ ಗಂಡು ಎಂದು ಶಿವ ಸಂಸ್ಕೃತಿ ಹೇಳಿದರೆ, ಪೂರ್ತಿ ಹೆಣ್ಣಾದಾಗಲೇ ಶರಣನಾಗಲು ಸಾಧ್ಯವೆಂದು ಶರಣಸಂಸ್ಕೃತಿಹೇಳುತ್ತದೆ.ಪೂರ್ತಿಹೆಣ್ಣಾಗುವುದೆಂದರೆ,ಪೂರ್ಣವಾಗಿಅಂತಃಕರಣಿಯಾಗಿರುವುದು.

ಹೀಗೆ ಪೂರ್ಣ ಅಂತಃಕರಣೆಯಾದವನೇ ನಿಜವಾದ ಶರಣನೆಂದು ವಚನಕಾರರು ಹೇಳುತ್ತಾರೆ.

ಇಹಕ್ಕೊಬ್ಬ ಗಂಡನೆ! ಪರಕ್ಕೊಬ್ಬ ಗಂಡನೆ?
ಲೌಕಿಕಕ್ಕೊಬ್ಬ ಗಂಡನೆ? ಪಾರಮಾರ್ಥಕ್ಕೊಬ್ಬ ಗಂಡನೆ?
ಎನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ
ಮಿಕ್ಕಿನ ಗಂಡರೆಲ್ಲ ಮುಗಿಲ ಮರೆಯ ಬೊಂಬೆಯಂತೆ

ಎಂದು ಸಾರುತ್ತಾಳೆ. ಜಗದೆದುರು ಅವಳು ಈ ಮಾತುಗಳನ್ನಾಡುವಾಗ ಅಕ್ಕನು ಸಾಧಿಸಿದ ದ್ವಂದ್ವವಿಲ್ಲದ 'ಏಕತ್ವ', ಚೆನ್ನನ ಮೇಲಿನ ಅಭಿಮಾನದ ಆಧಿಕ್ಯಗಳು ಗಾಢವಾಗಿಯೇ ಅಭಿವ್ಯಕ್ತಿಗೊಂಡಿರುವುದನ್ನು ನೋಡುತ್ತೇವೆ. ಅಕ್ಕನಲ್ಲಿ ಯಾವುದೇ ದ್ವಂದ್ವ, ಸಂಘರ್ಷಗಳಿಲ್ಲ. ಅವಳ ನಿಲುವು ಜಗವರಿಯುವಂತೆ ಅವಳಿಗೇ ಅತ್ಯಂತ ಸ್ಪಷ್ಟವಾಗಿದೆ. ಆಧ್ಯಾತ್ಮಿಕ ಸಾಧನೆಯ ಹಾದಿಯಲ್ಲಿ ಹೊರಟಿರುವ ಆಕೆಗೆ ಚೆನ್ನಮಲ್ಲಿಕಾರ್ಜುನನೇ ಗಂಡನಾಗಿದ್ದಾನೆ. ಅದು ಅಕ್ಕನ ಅರಿವು ಮತ್ತು ಅನುಭವಗಳಾಗಿವೆ. ಲೌಕಿಕರಿಗೆ ಅದು ಅರಿವಿಗೆ ಬಾರದ, ಅನುಭವಕ್ಕೆ ಬಾರದ ಸಂಗತಿಯಾಗಿಯೇ ಉಳಿದುಬಿಡುವ ಸಾದ್ಯತೆ ಇದೆ. ಆಧ್ಯಾತ್ಮಿಕಕ್ಕೆ ಒಬ್ಬ ಗಂಡ, ಲೌಕಿಕಕ್ಕೆ ಒಬ್ಬ ಗಂಡ ಇರಲು ಸಾಧ್ಯವಿಲ್ಲ. ಆಕೆಗೆ ಲೋಕದ ಕಣ್ಣಿಗೆ ಕಾಣಿಸುತ್ತಿರುವ 'ಕೌಶಿಕ'ನೆಂಬ ಗಂಡನ ಅರಿವಿದೆ. ಆ ಅರಿವನ್ನು ನಿರಾಕರಿಸಬೇಕಾದ ಚೆನ್ನಮಲ್ಲಿಕಾರ್ಜುನನೇ ತನ್ನ ಗಂಡ ಎಂದು ಸ್ಥಾಪಿಸಬೇಕಾದ ತುರ್ತು ಸಹ ಇದೆ. ಹಾಗಾಗಿಯೇ ಆಕೆ ನೇರವಾಗಿ ಲೌಕಿಕರ ಎದಿರು ಅದನ್ನು ಸ್ಪಷ್ಟಪಡಿಸುವ ಕಾರ್ಯವನ್ನು ಈ ವಚನದಲ್ಲಿ ಮಾಡಿದ್ದಾಳೆ.

ಶಿವಪಾರಮ್ಯ ಮತ್ತು ಏಕದೇವತಾನಿಷ್ಠೆಯನ್ನು ಇಡಿಯಾಗಿ ಎತ್ತಿ ಹಿಡಿಯುವ ಶರಣೆ ಸತ್ಯಕ್ಕನ 29 ವಚನಗಳು ಸದ್ಯಕ್ಕೆ ಲಭ್ಯವಿವೆ. 'ಶಂಬುಜಕ್ಕೇಶ್ವರ' ಎಂಬುದು ಅವಳ ವಚನಗಳ ಅಂಕಿತ. ಸತ್ಯಕ್ಕನಲ್ಲಿ ಕಂಡುಬರುವ ಸತಿಪತಿಭಾವದ ವಚನಗಳು ಸಮರ್ಪಣೆ ಮತ್ತು ಮಧುರಭಾವಗಳಿಂದ ಆವೃತಗೊಂಡಿದೆ.

ಲಿಂಗಪತಿಯೆಡೆಗಿನ ಹಂಬಲ, ವಿರಹ, ಮಿಲನ, ಅರ್ಪಣೆ ಇತ್ಯಾದಿಗಳ ಕುರಿತು ಲಿಂಗಸತಿಯ ತಹತಹಿಕೆ, ತಳಮಳ, ಸಂತಸಗಳನ್ನು ಅಭಿವ್ಯಕ್ತಿಸಿವೆ.

ಸತ್ಯಕ್ಕನ ವಚನಗಳಲ್ಲಿ ಸತಿಪತಿ ಭಾವಪ್ರಕಾರ **'ಜಗದೊಳಗೊಬ್ಬನೆ ಗಂಡನು'**. ಆ ಗಂಡನ ಕುರುಹಾದರೂ ಎಂತಹ ಅಲೌಕಿಕ ಸ್ವರೂಪದ್ದು ?!

ಗಂಡಗಂಡರ ಎದೆಯ ಮೆಟ್ಟಿ ನಡೆದವರುಂಟೆ?
ಗಂಡಗಂಡರ ಚಣವ ಮಾಡಿ ಉಟ್ಟವರುಂಟೆ?
ಗಂಡಗಂಡರ ಚರ್ಮವ ಹೊದ್ದವರುಂಟೆ?
ಗಂಡಗಂಡರ ತೊಟ್ಟವರುಂಟೆ?
ಗಂಡಗಂಡರ ತುರುಬಿದವರುಂಟೆ?
ಗಂಡಗಂಡರ ಭಸ್ಮವ ಮಾಡಿ ಹೂಸಿದವರುಂಟೆ?
ಗಂಡಗಂಡರಿಗೆ ಗಂಡನ ಕಣ್ಣು ಕಾಲಲ್ಲದೆ
ಗಂಡಗಂಡರಿಗೆ ಗಂಡನ ಶಿರ ಕರದಲ್ಲದೆ
ಗಂಡು ವೇಷವೆಂಬುದು ನಿಮ್ಮ ಶಕ್ತಿರೂಪು
ಗಂಡರಿಗೆ ಗಂಡನು ನಡೆಯಿತ್ತೆ ಬಟ್ಟೆ ಎಂಬುದು ನಿಮಗೆ ಸಂದಿತ್ತು
ಶಂಭುಜಕ್ಕೇಶ್ವರ ಶರಣ ಜಗದೊಳಗೊಬ್ಬನೆ ಗಂಡನು

ಇಂತಹ ಗಂಡರಗಂಡ ಈ ನಲ್ಲೆಗೆ ಸುಲಭವಾಗಿ ಸಿಗುತ್ತಿಲ್ಲ. ದೂರದಲ್ಲಿಯೇ ಇದ್ದಾನೆ. ಹಾಗಾಗಿ ತಳಮಳ, ತವಕ, ಅಸಹನೆಗಳೇ ಶರಣಸತಿ ಅನ್ನು ಆವರಿಸಿಕೊಂಡಿವೆ.

ಲಿಂಗಪತಿಯನ್ನೇ ಪ್ರಾಣಪದವಾಗಿ ಹೊಂದಿರುವ ನಲ್ಲೆಗೆ ಬೇರಾವ ಗಂಡನನ್ನೂ ಬಲ್ಲ ಅನುಭವವಿಲ್ಲ. ಅದರ 'ಪ್ರಮಾಣಕ್ಕಾಗಿ' ತನ್ನ ಗಣರದವಾಗಿರುವ ಲಿಂಗಪತಿಯ ಆಣೆಯನ್ನೇ ಇಡುತ್ತಾಳೆ. ಅಂತಹ ನಲ್ಲೆಯನ್ನು ಕಾಯಿಸುವ ಇದು ಪರಿ ನಿನಗೆ ಉಚಿತವೆ? ಪುರುಷ ಲಕ್ಷಣವೇ? ಎಂದವಳು ಪ್ರಶ್ನಿಸುತ್ತಾಳೆ. ಆದರೆ ನಲ್ಲನ ನಿರಾಕರಣೆಯನ್ನು ಒಪ್ಪಿ ಸುಮ್ಮನೆ ಕೂರುವ ಜಾಯಮಾನದವಳಲ್ಲ ಈ ನಲ್ಲೆ! "ಸಾಕಲಾಗದೆಂದು ಅಕ್ಕೊತ್ತಿ ನೂಕಿದಡೆ! ಏಕೆ ನಾ ನಿಮ್ಮ ಬಿಡುವೆ ಶಂಭುಕ್ಕೇಶ್ವರಾ?" ಎಂಬ ಛಲವನ್ನೂ ಮರೆಯುತ್ತಾಳೆ. ಇಷ್ಟೆಲ್ಲಾ ತಳಮಳ, ಆತಂಕ, ವಿರಹ, ನಿರೀಕ್ಷೆ, ಚಡಪಡಿಕೆಗಳನ್ನೆಲ್ಲಾ ಶರಣಸತಿ ವ್ಯಕ್ತ ಮಾಡಿದರೂ ಅವಳಿಗೆ ಆತ್ಯಂತಿಕವಾದ ಸತ್ಯದ ಅರಿವು ಏನು ಎಂಬುದರ ಮಹಾನುಭವವೂ ಇದೆ.

ಹೊರಗಿದ್ದ ಹನೆಂದು ನಾನು ಮರೆದು ಮಾತನಾಡಿದೆ;
ಅರಿಯಲೀಯದೆ ಬಂದೆನ್ನ ಅಂತರಂಗದಲ್ಲಿಪ್ಪನು
ತೆರಹಿಲ್ಲದಭವ ನುಡಿಗೆಡೆಗೊಡನು;

ಆತನ ಬಯಲಿಂಗೆ ಬೇಟಗೊಂಡೆನವ್ವಾ

ನಾನೇನ ಮಾಡುವೆನೆಲೆ ತಾಯೆ

ಮರೆದಡೆ ಎಚ್ಚರಿಸುವ ಕುರುಹಿಲ್ಲದ ಗಂಡನು

ತನ್ನನರಿದಡೆ ಒಳ್ಳಿದನವ್ವಾ ನಮ್ಮ ಶಂಭುಜಕ್ಕೇಶ್ವರನು

ತಾನು ಹೊರಗೆ ಹುಡುಕಾಡುತ್ತಿರುವ ಆತ ತನ್ನ ಅಂತರಂಗದಲ್ಲಿಯೇ ಇದ್ದಾನೆ, ಆವರಿಸಿಕೊಂಡಿದ್ದಾನೆ. ಮಾತಿಗೆ ಮೀರಿದ ಅಭವನಾತ, ಆತನ 'ಬಯಲಿಂಗೆ' ಅವಳು 'ಬೇಟ'ಗೊಳ್ಳುತ್ತಾಳೆ. ಅವನು 'ಕುರುಹಿ'ಲ್ಲದಾತ, ಶರಣಸತಿ ಕೊಡುವ ಲಿಂಗಪತಿಯ ಚಿತ್ರಣ ಆತನ ಅಲೌಕಿಕ, ಅಮೂರ್ತ, ಅಪ್ರಮೇಯ, ಅನಂತ ಸ್ವರೂಪವನ್ನು ತೆರೆದಿಡುತ್ತದೆ. ಸತಿಪತಿಭಾವ ಮುಟ್ಟಬಹುದಾದ 'ಅನುಭಾವ'ದ ನೆಲೆಯ ಸ್ವರೂಪವನ್ನು ಸತ್ಯಕ್ಕನ ವಚನಗಳು ಸಶಕ್ತನಾಗಿ ತೋರಿಸಿಕೊಡುತ್ತವೆ.

ಸತಿಪತಿಭಾವ ಮೋಳಿಗೆ ಮಹಾದೇವಿಯಲ್ಲಿಯೂ ಅನುಭಾವದ ಮಟ್ಟದಲ್ಲಿಯೇ, ಅವಳ ವಚನಗಳಲ್ಲಿ ಅಲ್ಲಲ್ಲಿ ಮಿನುಗುತ್ತವೆ. ಆದ್ಯರ ವಚನ, ಶರಣರ ಸಂಗದಿಂದ, ಮಹಾಲಿಂಗದ ಸಂಯೋಗವನ್ನು ಪಡೆದುಕೊಳ್ಳುವ 'ಅಮೃತದ ಕೊಡವೊಂದನ್ನು' ಅಂತ್ಯದಲ್ಲಿ ಆಕೆ ಕಾಣುತ್ತಾಳೆ. ಅದು ಅಂತಿಂಥ ಅಮೃತದ ಕೊಡವಲ್ಲ. ಅದನ್ನು

ಕಂಡವನೆ ಉಂಡ, ಉಂಡವನೆ ಉರಿದ, ಉರಿದವನೆ ಕರದ,

ಕರದವನೆ ನೆರದ, ನೆರದವನೆ ಕುರುಹನರಿದ

ಅರಿದವನೆ ನಿಮ್ಮನ್ನರಿದವ

ಎಂದು ಅರಿವಿನ ಮೂಲವಾಗಿ ಗುರುತಿಸಿ ಅರ್ಥೈಸುತ್ತಾಳೆ, ಲಿಂಗ ಬೇರೆ ತಾ ಬೇರೆ ಎಂಬ ಭಾವ ಭಕ್ತನಿಗೆ ಇರಬಾರದು. ಕೂಟದ ಕುರುಹು, ಆತ್ಮದ ಅರಿವುಗಳನ್ನರಿಯದೆ ತಂದುಕೊಳ್ಳುವ ಉಭಯಭಾವನೆ ದಂದುಗವನ್ನು ಬೇಡವೆನ್ನುವ ಅವಳ ಅನುಭವ 'ತಾ ನಿಂದಲ್ಲಿಯ ನಿಜಕೂಟ ತಿಳಿದಲ್ಲಿಯೇ ನಿರಂಗ ಉಭಯವಿಲ್ಲ' ಎಂಬ ಎತ್ತರವನ್ನು ಮುಟ್ಟುತ್ತದೆ. ಅಲ್ಲೆಲ್ಲೋ ಇರುವ ಕೈಲಾಸವನ್ನು ನಿರಾಕರಿಸುವ ಅವಳು ತಾನಿರುವಲ್ಲಿಯೇ ಲಿಂಗಾಂಗಸಾಮರಸ್ಯ ಕಾಣುವ ನಿಜಸ್ಥಿತಿಯನ್ನು ಮುಟ್ಟಿದವಳೂ ಆಗಿದ್ದಾಳೆ. 'ನೀನೇ ಗತಿ, ನೀನೇ ಮತಿ, ನೀನಲ್ಲದೆ ಪೆರತೊಂದನರಿಯೆ' ಎನ್ನುವವರಲ್ಲಿ ಲಿಂಗಪತಿ ಇರಲೇಬೇಕು. ಹಾಗಿಲ್ಲದಿದ್ದರೆ "ನಿನಗದೆ ವಿಶ್ವಾಸಘಾತಕ! ನಿನಗದೆ ಪಾತಕ" ಎಂಬ ತಪ್ಪನ್ನು ಅವನ ಮೇಲೆ ಹಾಕುತ್ತಾಳೆ. ದುಕೂಲ, ಹೇಮ, ಮೌಕ್ತಿಕ ರತ್ನ, ಚಂದನ, ಗಂಧ, ಛತ್ರ–ಚಾಮರ, ಕರಿ–ತುರಗ, ಇತ್ಯಾದಿ ತಾನೇ ಅನುಭವಿಸುವ ವೈಭವಗಳನ್ನು ಲಿಂಗಕ್ಕೆಂದು ಕಲ್ಪಿಸುವ ಭಕ್ತನನ್ನೂ ಆಕೆ ಜರಿಯದೆ ಬಿಡುವುದಿಲ್ಲ.

ಅಂಬರದ ವರ್ಣ ನಾನಾ ಚಿತ್ರದಲ್ಲಿ ಸಂಭ್ರಮಿಸಿ

ಕಂಗಳು ಮುಚ್ಚಿ ತೆರೆವುದಕ್ಕೆ ಮುನ್ನವೆ ಅದರಂದದ

ಕಳೆ ಅಳಿದಂತಿರಬೇಕು

ಇದು ಲಿಂಗ ಭೋಗೋಪಭೋಗಿಯ ಸಂಗದ ಸುಖ

ನಿರಂಗದ ನಿಶ್ಚಯ

ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಲಿಂಗದಲ್ಲಿ

ವಿರಳವಿಲ್ಲದ ಪರಮಸುಖ

ಲಿಂಗಪತಿಯೊಡನೆಯ ಸಂಗಸುಖವನ್ನು ವಿರಳವಿಲ್ಲದ ಪರಮ ಸುಖವನ್ನು ಆಕಾಶದ ವರ್ಣಗಳು ವಿವಿಧ ಚಿತ್ರಗಳನ್ನು ಬಿಡಿಸುವ ಸಂಭ್ರಮಕ್ಕೆ ಹೋಲಿಸುವ ಇಲ್ಲಿನ ರೀತಿ ಸೊಗಸಾಗಿ ಕಣ್ಣು ಕಟ್ಟುತ್ತದೆ. ಅರಿತರೂ ಅರಿಯಲಾಗದ, ಕಂಡರೂ ಕೈಗೆ ಸಿಗದ, ಸುಖವದು. ಆ ಸುಖವನ್ನು ಅವಳು ತನ್ನ ಮತ್ತು ಶಿವನ ಷಟ್ಸ್ಥಲಕ್ಕೆ ಹೋಲಿಸುತ್ತಾಳೆ.

ಎನ್ನಯ್ಯಾ, ಎನ್ನ ನಿನ್ನ ಷಟ್‌ಸ್ಥಲ

ಇದಕ್ಕೆ ಭಿನ್ನಭಾವವಿಲ್ಲ

ಅದು ಎನ್ನ ನಿನ್ನ ಕೂಟದ ಸುಖದಂತೆ

ತನ್ನೊಳಗೇ ಇರುವ ಲಿಂಗಪತಿಯನ್ನು ಕೂಡಿದೆನೆಂಬ ಮಾತನ್ನು ಅವಳು ಒಪ್ಪುವುದಿಲ್ಲ. ಅದು "ಸ್ವಯವಿದ್ದಂತೆ ಲಯ ಕೂಡುವ, ಪರುಷವಿದ್ದಂತೆ ಪ್ರೇಮವನ್ನು ಅರಸುವ, ಸ್ವಯಂಜ್ಯೋತಿಯಿದ್ದಂತೆ ದೀಪವನ್ನು ಅರಸುವ" ಕೆಲಸವಾಗುತ್ತದೆ. ಅವಳ ಪ್ರಕಾರ 'ಲಿಂಗದ ಕೂಟವೆ ನಿರ್ಯಾಣ'ವಾಗಿದೆ. ಆ ಭಾವವನ್ನು ಈ ಕೆಳಗಿನ ವಚನ ವಿಸ್ತಾರವಾಗಿ ವಿವರಿಸುತ್ತದೆ.

ಅದೇತಕ ಅಯ್ಯಾ

ಶಿವನೊಳಗೆ ಕೂಟಸ್ಥನಾದೆಹೆನೆಂಬ ಹಲುಬಾಟ?

ಇದು ನಿತ್ಯಸತ್ಯದ ಆಟವಲ್ಲ;

ಇನ್ನಾರಿಗೆ ಕೇಳಿ, ಮತ್ತಿನ್ನಾರಿಗೆ ಹೇಳುವೆ ನೀ ಮಾಡುವ ಮಾಟ

ಮುನ್ನ ನೀನಾರೆಂದಿದ್ದ ಹೇಳಾ?

ಆ ಭಾವವನರಿದು ನಿನ್ನ ನೀನು ತಿಳಿ

ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ.

ಬಸವಣ್ಣನವರ ಸಹೋದರಿಯಾದ ಅಕ್ಕನಾಗಮ್ಮನವರ ಒಂದು ವಚನದಲ್ಲಿ ಸತಿಪತಿಭಾವ ಅತ್ಯಂತ ನೇರವಾಗಿ ಮತ್ತು ಸುಂದರವಾಗ ಅಭಿವ್ಯಕ್ತಿಗೊಂಡಿದೆ:

ಶ್ರೀಗುರುವೆ ತಾಯಿತಂದೆಯಾಗಿ, ಲಿಂಗವೆ ಪತಿಯಾಗಿ,

ಜಂಗಮವೆ ಅತ್ತೆ–ಮಾವಂದಿರಾಗಿ, ಶಿವಭಕ್ತರೆ ಬಾಂಧವರಾಗಿ

ಸತ್ಯಸದಾಚಾರವೆಂಬ ಮನೆಗೆ ಕಳುಹಿಸಿದರಾಗಿ
ಶರಣಸತಿ ಎಂಬ ನಾಮ ನಿಜವಾಯಿತ್ತು
ಅದಂತೆ ಇರುವೆ ಹಿಂದುಮುಂದರಿಯದೆ ನಡೆವ
ಮನಕ್ಕೆ ಮನ ಸಾಕ್ಷಿಯಾಗಿ ಮಾಡುವೆ
ಬಸವಣ್ಣಪ್ರಿಯ ಚೆನ್ನಸಂಗಯ್ಯಾ ನಿಮ್ಮಡಿಗಳಿಗೆ

ಅಕ್ಕಮಹಾದೇವಿಯ ವಚನಗಳನ್ನು ನೆನಪಿಸುವಂತಿರುವ ಈ ವಚನ ಸತಿಪತಿಭಾವವನ್ನು ಇತರ ಸಂಬಂಧಗಳ ಭಾವದೊಂದಿಗೆ ಜೋಡಿಸುವ ಒಂದು ಸುಂದರ ಪ್ರಯತ್ನವಾಗಿದೆ. ಲಿಂಗಪತಿ ಇರುವ ಮತ್ತು 'ಸತ್ಯಸದಾಚಾರ'ದ ಮನೆಯೇ ಆಗಿದೆ. ಆ ಮನೆಯಲ್ಲಿ ಮನಕ್ಕೆ 'ಮನಸಾಕ್ಷಿಯಾಗಿ' ಬಾಳುವೆ ಮಾಡುವ 'ಪ್ರಮಾಣ' ನಾಗಮ್ಮನದಾಗಿದೆ.

ಕಾಯಕಜೀವಿಯಾದ ಶರಣೆ ಕದಿರ ರೆಮ್ಮವ್ವಯ ನಾಲ್ಕು ವಚನಗಳಲ್ಲಿ ಎರಡು ವಚನಗಳು ಸತಿಪತಿಭಾವವನ್ನು ಅಭಿವ್ಯಕ್ತಿಸಿದರು. ಇಲ್ಲಿನ ಅಭಿವ್ಯಕ್ತಿ ಬೆಡಗಿನ ವಚನಗಳ ಸ್ವರೂಪದ್ದು. ಸುಲಭವಾಗಿ ಅರ್ಥವಾಗಲು ಸಾಧ್ಯವಿಲ್ಲದ್ದು. ರೆಮ್ಮವ್ವೆ ಮುಟ್ಟಿದ ಅನುಭಾವದ ಎತ್ತರದ ಪರಿಯನ್ನು ಪ್ರತಿಬಿಂಬಿಸುವಂಥದ್ದು ಆಗಿದೆ.

ಎಲ್ಲರ ಗಂಡಂದಿರು ಪರದಳವಿಭಾಡರು;
ನಿನ್ನ ಗಂಡ ಮನದಳವಿಭಾಡ
ಎಲ್ಲರ ಗಂಡಂದಿರು ಗಜವೇಂಟೆಕಾರರು
ಎನ್ನ ಗಂಡ ಮನವೇಂಟೆಕಾರ
ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು;
ಎನ್ನ ಗಂಡ ತಾರದೆ ಇಕ್ಕಿಸಿಕೊಂಬ
ಎಲ್ಲರ ಗಂಡಂದಿರಿಗೆ ಮೂರು
ಎನ್ನ ಗಂಡಂಗೆ ಅದೊಂದೆ
ಅದೊಂದು ಸಂದೇಹ, ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ

ಇಲ್ಲಿನ ಶರಣಸತಿ ತನ್ನ ಲಿಂಗಪತಿಗೂ, ಇತರ ಗಂಡಂದಿರಿಗೂ ಇರುವ ವ್ಯತ್ಯಾಸವನ್ನು ಪಟ್ಟಿ ಮಾಡುತ್ತಾ ಹೋಗುತ್ತಾಳೆ. ಲೋಕದೊಡೆಯನಾದ ಲಿಂಗಪತಿಯ ಪರಿಯೇ ಬೇರೆ. ಲೌಕಿಕದೊಳಗಿರುವ ಇತರ ಗಂಡಂದಿರ ಪರಿಯೇ ಬೇರೆ. ಬೇರೆಯವರೆಲ್ಲರ ಗಂಡಂದಿರು ವೈರಿಸೈನ್ಯವನ್ನು ನಾಶ ಮಾಡುವ ವೀರರಾದರೆ ಇವಳ ಗಂಡ ಮನವೆಂಬ ಶತ್ರುಸೈನ್ಯವನ್ನು ಗೆಲ್ಲುವಾತ, ಬೇರೆಯ ಗಂಡಂದಿರು ಗಜವೇಂಟೆಕಾರ ಆದರೆ ಈತ ಮನವೇಂಟೆಕಾರ. ಬೇರೆಲ್ಲ ಗಂಡಂದಿರು ತಂದು ಇಕ್ಕಿಸಿಕೊಂಡು ಉಂಡರೆ,

ಇವನು ತಾರದೆಯೇ ಇಕ್ಕಿಸಿಕೊಳ್ಳುತ್ತಾನೆ. ಕೊನೆಯ ಹೋಲಿಕೆಯಂತೂ ಅನುಭವಾತೀತವಾದದ್ದು. ಅರ್ಥವನ್ನು ಮೀರಿದ್ದು, ಸಾಮಾನ್ಯರಿಗೆ ಅರ್ಥವೇ ಆಗದ್ದಾಗಿ ಕಂಡುಬರುತ್ತದೆ. ಅದೊಂದು ಒಗಟಾಗಿ ಕಂಡುಬರುತ್ತದೆ. ಅದನ್ನು ಬಿಡಿಸಲು ಶರಣಸತಿಗಷ್ಟೇ ಸಾಧ್ಯ ಎನ್ನುವ ಒಗಟು. ಇಂಥದ್ದೇ ಅನುಭವವನ್ನು ಇನ್ನೂ ತೀವ್ರವಾಗಿ ಮೂಡಿಸುವ ಅವಳದೇ ಮತ್ತೊಂದು ವಚನ ಹೀಗಿದೆ :

ಎಲ್ಲರ ಹೆಂಡಿರು ತೊಳಸಿಕ್ಕುವರು;
ಎನ್ನ ಗಂಡಂಗೆ ತೊಳಸುವುದಿಲ್ಲ
ಎಲ್ಲರ ಗಂಡಂಗೆ ಬಸಿವರು;
ಎನ್ನ ಗಂಡಂಗೆ ಬಸಿವುದಿಲ್ಲ
ಎಲ್ಲ ಗಂಡಂದಿರಿಗೆ ಬೀಜವುಂಟು;
ಎನ್ನ ಗಂಡಂಗೆ ಅಂಡದ ಬೀಜವಿಲ್ಲ
ಎಲ್ಲರ ಗಂಡಂದಿರು ಮೇಲೆ;
ಎನ್ನ ಗಂಡ ಕೆಳಗೆ, ನಾ ಮೇಲೆ
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ

ಲೌಕಿಕ ಮತ್ತು ಪಾರಲೌಕಿಕಗಳ ತುಲನೆ ಮಾಡುತ್ತಿರುವ ಶರಣಸತಿ ಇಲ್ಲಿಯೂ ಅಲೌಕಿಕ, ಅನನ್ಯ, ಅಭವನಾದ ಗಂಡನ ವೈಶಿಷ್ಟ್ಯವನ್ನು ಬೆಡಗಿನ ರೂಪದಲ್ಲಿ ಹಿಡಿದಿಡಲು ಪ್ರಯತ್ನಿಸುತ್ತಾಳೆ. ಈ ವಚನಗಳನ್ನು ನೋಡಿದಾಗ ಆಕೆ ಶರಣರ ಅನುಭಾವಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದುದರ ಸಾರ್ಥಕತೆಯ ಅನುಭವ ಮೂಡುತ್ತದೆ. (ಈ ಬೆಡಗಿನ ವಚನಗಳಿಗೆ ಸಿಂಗಳದ ಸಿದ್ಧಬಸವರಾಜ ಟೀಕೆಯನ್ನು ಬರೆದಿದ್ದಾರೆ). ಸತಿಪತಿಭಾವ, ಶರಣಸತಿ–ಲಿಂಗಪತಿ ಸಂಬಂಧ ಅಸಾಮಾನ್ಯದ್ದು, ಅಲೌಕಿಕದ್ದು, ಅನುಭಾವದ್ದು ಎಂಬುದನ್ನು ಈ ವಚನಗಳೂ ಸಹ ಪ್ರತಿಬಿಂಬಿಸುತ್ತವೆ.

ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಅಗ್ರಪಂಕ್ತಿಯಲ್ಲಿ ಕಂಡುಬರುವ ಮತ್ತೋರ್ವ ಶರಣ, ವಚನಕಾರ ಸಿದ್ಧರಾಮೇಶ್ವರ. ಸಿದ್ಧರಾಮ, ಕಾಯಕಯೋಗಿ ಸಿದ್ಧರಾಮ, ಸಿದ್ಧರಾಮಯ್ಯ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಿರುವ ಸಿದ್ಧರಾಮೇಶ್ವರರ ಅಂಕಿತ ಕಪಿಲಸಿದ್ಧಮಲ್ಲಿಕಾರ್ಜುನ ಎಂಬುದು. ಆ ಕಾಲಮಾನದ ಇತರ ವಚನಕಾರರಿಗಿಂತ ಸಿದ್ಧರಾಮೇಶ್ವರರು ವಿಶಿಷ್ಟರಾಗುವುದು ಬಸವಣ್ಣನವರ ಹಾಗೆಯೇ ಅವರು ಕೈಗೊಂಡ ಸಾಮಾಜಿಕ ಹೊಣೆಗಾರಿಕೆಯ ಕಾರ್ಯ ಚಟುವಟಿಕೆಗಳಿಂದ.

ಸಾಮಾಜಿಕ ಹೊಣೆಗಾರಿಕೆಯ ಕಾರ್ಯದಲ್ಲಿ ತೊಡಗಿಕೊಂಡಿದ್ದ ಸಿದ್ಧರಾಮರು ತಾಯಿಮನಸ್ಸಿನ, ಹೆಂಗರುಳ ಹೃದಯವನ್ನು ಹೊಂದಿದವರಾಗಿದ್ದರು ಎಂಬುದು ಮುಖ್ಯವಾದ ಅಂಶ. ಹಾಗೆಯೇ ಅವರ ವಚನಗಳಲ್ಲಿ ವ್ಯಕ್ತಗೊಂಡಿರುವ ವೈಚಾರಿಕತೆಯೂ ಪ್ರಖರವಾದದ್ದೆ. “ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ,

ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂದ ಸಿದ್ಧರಾಮರ ವಚನಗಳಲ್ಲಿ ಸತಿಪತಿಭಾವದ ವಚನಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಕಪಿಲಸಿದ್ಧ ಮಲ್ಲಿಕಾರ್ಜುನನನ್ನೇ ಪತಿಯಾಗಿ, ತಾವು ಅವನ ಸತಿಯಾಗಿ ನಡೆಸುವ ಲಿಂಗಾಂಗಸಾಮರಸ್ಯದ ವಚನಗಳು ಮನೋಜ್ಞವಾಗಿ ಕಂಡುಬರುತ್ತವೆ.

ಸುಕೃತಾಂಗಿಯ ಮಾಡಿ ಮರ್ತ್ಯಕ್ಕೆ ತಂದಿರಯ್ಯಾ "ಎಂದೇ ತಮ್ಮ ಇಹದ ಬದುಕನ್ನು ಗುರುತಿಸಿಕೊಳ್ಳುವ ಸಿದ್ಧರಾಮರರು" ಒಲುಮೆಯ ಮಚ್ಚು ನಿಚ್ಚಯ"ವೆಂದು ನಂಬಿದವರು, "ವಿಕಳತೆಯಿಂದ ಭೂತನಾಗಿ, ನೆನಹಿನ ಧ್ಯಾನದಿಂದ ಮೂರ್ಛಿತನಾಗಿ, ಭಕ್ತಿರತಿಯಲ್ಲಿ ಸಂಪನ್ನನಾದವನು" ಎಂದು ತಮ್ಮನ್ನು ಚಿತ್ರಿಸಿಕೊಳ್ಳುವ ಸಿದ್ಧರಾಮರು "ನೀನೆನ್ನ ಮನದ ಮಹೋತ್ಸವ" ಎಂದು" "ನಿಮ್ಮ ವಶಕ್ಕೆನ್ನ ತೆಗೆದುಕೊಳ್ಳಯ್ಯಾ", "ನೀ ಬಂದು ಅವಿರತವಿಲ್ಲದೆ ಕೂಡಿ ನಿನ್ನವಳೆಂದೆನಿಸಾ" ಎಂದು ತಹತಹಿಸಿ ಪ್ರಾರ್ಥಿಸುತ್ತಾರೆ. "ಶರಣಸತಿ ಲಿಂಗಪತಿಯಪ್ಪ ಶಿವಭಕ್ತನ ಅಂತವನಿಂತವನೆಂದಡೆ । ಅಘೋರ ನರಕದಲ್ಲಿಕ್ಕುವನವ್ವಾ, ನಮ್ಮ ಕಪಿಲಸಿದ್ಧಮಲ್ಲಿನಾಥ" ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾರೆ. "ಅಂಗಜ ಬಂದು ಫಲವೇನಯ್ಯ? ನಾ ಮನವೊಲಿದು ರತಿಗೊಲಿಯದನ್ನಕ್ಕ। ಶರಣತಿ ಲಿಂಗಪತಿ ಎಂಬ ವೀರತ್ವ ಕೆಟ್ಟಿತೆನ್ನಲೆಕಪಿಲಸಿದ್ಧ ಮಲ್ಲಿಕಾರ್ಜುನ" ಎಂದು ಪ್ರಶ್ನಿಸುತ್ತಾರೆ. "ಅಯ್ಯಾ ಎನ್ನನೆನಿಸು ಭವಬರಿಸಿದಡೆ । ನೀನೇ ಗಂಡ ನಾನೇ ಹೆಂಡತಿ । ಕಪಿಲಸಿದ್ಧ ಮಲ್ಲೇಶ್ವರ ದೇವರದೇವಯ್ಯ" ಎಂದು ನೇರವಾಗಿಯೇ ಘೋಷಿಸುತ್ತಾರೆ.

ಸಿದ್ಧರಾಮರ ವಚನಗಳು ಅಕ್ಕಮಹಾದೇವಿಯಷ್ಟೇ ಸಶಕ್ತವಾದ ಸತಿಪತಿ ಭಾವವನ್ನು ತೀವ್ರವಾಗಿ ಅಭಿವ್ಯಕ್ತಿಸುತ್ತವೆ. ಆ ಅಭಿವ್ಯಕ್ತಿ ಸರಳ ಮತ್ತು ನೇರವಾದ ತುಡಿತವಾಗಿದೆ. ತನ್ನನ್ನು ಸತಿಯಾಗಿ ಶಿವನನ್ನು ಪತಿಯಾಗಿ ಭಾವಿಸಿ ಭಕ್ತಿರತಿಯಲ್ಲಿ ಮುಳುಗಿಹೋಗಲು ಇಚ್ಚಿಸುವ ಸಿದ್ಧರಾಮಲ್ಲಿಯೂ ಅವರೊಲಿದ ಶಿವನ ರೂಪು, ನಿಲುವು, ಚೆಲುವು, ಅಸ್ಮಿತೆ, ಅಸೀಮ ಗುಣಗಳು ವ್ಯಕ್ತಗೊಳ್ಳುವ ಪರಿಯನ್ನು ಕುತೂಹಲದಿಂದಲೇ ನೋಡುವ ರೀತಿಯನ್ನು ಗಮನಿಸಬೇಕು. ಸಿದ್ಧರಾಮರು ತಮ್ಮ ಲಿಂಗಪತಿಯಾದ ಕಪಿಲಸಿದ್ಧಮಲ್ಲಿಕಾರ್ಜುನನ ಚಿತ್ರಣವನ್ನು ತಮ್ಮ ಒಂದು ವಚನದಲ್ಲಿ ಕೊಡುವ ಪರಿ ಹೀಗಿದೆ:

ಎಲ್ಲರ ಪರಿಯಲ್ಲ ಅವನ ಪರಿ ಹೊಸತು
ಕಾಲಾರರಲ್ಲಿ ನಡೆವ, ಕಿವಿಯಲ್ಲಿ ಉಂಬ
ಮೂಗಿನಲ್ಲಿ ನೋಡುವ, ಬಾಯಲ್ಲಿ ಭಾವಿಸುವ
ಕಣ್ಣಿನಲ್ಲಿ ಮೂರ್ಛೆ ಹೋಹ
ಬಂದುದನತಿಗಳೆವ, ಬಾರದುದ ತನ್ನದೆಂಬ
ಇಂಥಾ ವಿನೋದವಿಚಿತ್ರನವ್ವಾ, ಕಪಿಲಸಿದ್ಧಮಲ್ಲಿಕಾರ್ಜುನನು

ಅಲೌಕಿಕನಾದ, ಲೋಕಾತೀತ ಮಹಾಮಹಿಮನ ನಿಲುವು, ಲೋಕಿಕ್ಕೇ ವಿರುದ್ಧವಾಗಿರುವ ವಿನೋದ, ವೈಚಿತ್ರ್ಯದ ನಿಲುವು ಇದು. ಲೌಕಿಕ ನಡೆ, ನುಡಿಗಳಿಗೆ ವಿರುದ್ಧವಾಗಿರುವ ಚಿತ್ರಣವಿದು. ಹಾಗಾಗಿಯೇ ಅವನ ಪರಿ ಹೊಸತಾಗಿದೆ. ಊಟ ಮಾಡುವ ಬಾಯಲ್ಲಿ ಭಾವಿಸುವ, ಮೂಗಲ್ಲಿ ನೋಡುವ, ಕಿವಿಯಲ್ಲಿ ಉಣ್ಣುವ ಲೋಕವಿಪರೀತವಾದ ವೈರುದ್ಧ್ಯಗಳ ಮೊತ್ತ ಆತ. "ಬಂದುದನತಿಗಳೆವ ಬಾರದುದ ತನ್ನದೆಂಬ" ಆತನ ಸ್ವಭಾವ ಮಾತ್ರ ನೇರವಾದುದು, ಉಳಿದುದೆಲ್ಲಾ ಅತೀತವಾದುದು

ಬಸವಣ್ಣನವರ ವಚನ ಸಾಹಿತ್ಯವು ಅವರ ಕವಿಹೃದಯದ ದ್ಯೋತಕವಾಗಿಯೂ ನಮ್ಮ ಮುಂದಿದೆ. ಬಸವಣ್ಣನವರು ಕೂಡಲಸಂಗಮದೇವನ ಜೊತೆಯಲ್ಲಿ ಭಕ್ತನಾಗಿ, ಮಗನಾಗಿ, ಸೇವಕನಾಗಿ, ಸತಿಯಾಗಿ ಹೀಗೆ ನಾವು ರೂಪಗಳಲ್ಲಿ ಸಂಬಂಧ, ಸಂವಾದಗಳನ್ನು ಏರ್ಪಡಿಸಿಕೊಂಡಿರುವುದು ಅವರ ವಚನಗಳಲ್ಲಿಯೇ ಅಭಿವ್ಯಕ್ತಗೊಂಡಿದೆ. ಬಸವಣ್ಣನವರ ಒಳ್ಳೆಯ ವಚನಗಳ ಸಂಖ್ಯೆಯ ಜೊತೆ ಹೋಲಿಸುವಾಗ ಅವರ ಸತಿಪತಿಭಾವ ವಚನಗಳು ಕಡಿಮೆ ಎನ್ನಿಸಿದರೂ ಆ ವಚನಗಳು ಅತ್ಯಂತ ಸಮಾನವಾಗಿ, ಧ್ವನಿಪೂರ್ಣವಾಗಿ ಆ ಭಾವವನ್ನು ಎತ್ತಿ ಹಿಡಿದಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಕೆಲವು ವಚನಗಳಂತೂ ಒಬ್ಬ ಸ್ತ್ರೀಯು ಮಾತನಾಡುತ್ತಿರುವ ಅನುಭವವನ್ನು ಮೂಡಿಸುವಷ್ಟರ ಮಟ್ಟಿಗೆ ಸೂಕ್ಷ್ಮ ಸಂವೇದನೆಗಳನ್ನು ಒಳಗೊಂಡು ಗಮನ ಸೆಳೆಯುತ್ತವೆ.

ಮನಕ್ಕೆ ಮನೋಹರವಲ್ಲದ ಗಂಡರು
ಮನಕ್ಕೆ ಬಾರರು, ಕೇಳವ್ವಾ ಕೆಳದಿ
ಪನ್ನಗಭೂಷಣರಲ್ಲದ ಗಂಡರು
ಇನ್ನೆನಗಾಗದ ಮೊರೆ, ನೋಡವ್ವಾ
ಕನ್ನೆಯಂದಿನ ಕೂಟ, ಚಿಕ್ಕಂದಿನ ಬಾಳುವೆ
ನಿಮ್ಮಾಣೆಯಯ್ಯಾ, ಕೂಡಲಸಂಗಮದೇವಾ

ವಚನದ ಮೊದಲೆರಡು ಸಾಲುಗಳೇ ವಚನದಲ್ಲಿನ ಧ್ವನಿಪೂರ್ಣ ಭಾಗವಾಗಿವೆ. ವಚನದ ಆಚೆಗೂ, ಬಸವಣ್ಣನ ಅನುಭವದಾಚೆಗೂ ಸ್ತ್ರೀಯ ಬದುಕಿನಲ್ಲಿ ಸಾರ್ವತ್ರಿಕವಾಗಿರಬಹುದಾದ ಸತ್ಯವೊಂದು ಇಲ್ಲಿ ತೆರೆದುಕೊಳ್ಳುತ್ತಿದೆ. ಗಂಡ ರೂಪು, ಶ್ರೀಮಂತಿಕೆ, ವಿದ್ಯೆ ಇತ್ಯಾದಿಗಳೇನನ್ನು ಹೊಂದಿರುವುದೂ ಸ್ತ್ರೀಯ ಸಂದರ್ಭದಲ್ಲಿ ಮುಖ್ಯವಲ್ಲ. ಅವನು ಮೊದಲಿಗೆ ಮನಕ್ಕೆ 'ಮನೋಹರ'ವಾಗಿರಬೇಕು. ಅದು ಸಾಧ್ಯವಿಲ್ಲವಾದರೆ 'ಮನಕ್ಕೆ' ಬಾರದ ಸ್ಥಿತಿಯಲ್ಲಿಯೇ ಆತ ಉಳಿಯುತ್ತಾನೆ. ಶರಣಸತಿಯಾಗಿರುವ ಬಸವಣ್ಣ ಲಿಂಗಪತಿ ತನ್ನ ಮನಕ್ಕೆ 'ಮನೋಹರ'ವಾಗಿ ಬಂದಿರುವ ಬಗೆಯನ್ನು ತಿಳಿಸುತ್ತಾರೆ. 'ಪನ್ನಗಭೂಷಣ'ನಲ್ಲದೆ ಬೇರಾವ ಗಂಡರ ಮೊರೆಯೂ ಈ ಸತಿಗೆ ಆಗದ ಮೊರೆಯೆ! ಅಂತಹ

ಲಿಂಗಪತಿಯನ್ನು ತನ್ನವನೆಂದು ಜಗದೆದುರು ಹೇಳಿಕೊಳ್ಳುವುದು ಈ ಸತಿಗೆ ಹೆಮ್ಮೆ ಮತ್ತು ಅಭಿಮಾನದ ವಿಷಯವೇ ಆಗಿದೆ.

ಭಕ್ತಿಭಂಡಾರಿಯಾದ ಬಸವಣ್ಣನವರ ವಚನಗಳಲ್ಲಿ ಬಹುತೇಕ ವಚನಗಳು ಅವರ ಅಂತರಂಗ ನಿರೀಕ್ಷಣೆ, ಆತ್ಮನಿವೇದನೆ, ಅನನ್ಯ ಭಕ್ತಿಗಳನ್ನು ಅಭಿವ್ಯಕ್ತಿಸುತ್ತವೆ. ಅವರ ಸತಿಪತಿಭಾವದ ವಚನಗಳು ಸಂಖ್ಯೆಯಲ್ಲಿ ಕಡಿಮೆಯೆನ್ನಿಸಿದರೂ ಸತ್ತ್ವದಲ್ಲಿ ಉನ್ನತ ಸ್ಥಾನವನ್ನೇ ಪಡೆದುಕೊಳ್ಳುತ್ತವೆ. ಅವರ ವಚನಗಳ ಮೂಲಕ ಅಭಿವ್ಯಕ್ತಗೊಳ್ಳುವ ಶರಣಸತಿಯ ಸೂಕ್ಷ್ಮ ಸಂವೇದನೆಗಳು ಅಪೂರ್ವವಾಗಿ ಕಂಡುಬರುತ್ತವೆ, ಅವುಗಳ ಪ್ರಾಮಾಣಿಕತೆ ಹುಸಿಯೆನ್ನಿಸದಿರುವುದು ಆ ಅನನ್ಯತೆಗೆ ಕಾರಣವಾಗಿದೆ. ಆ ವೈಶಿಷ್ಟ್ಯತೆಗೆ ಕಾರಣವಾಗಿರುವುದು ಬಸವಣ್ಣನವರ ವ್ಯಕ್ತಿತ್ವದಲ್ಲಿಯೇ ಅಡಕವಾಗಿರುವ ಸ್ತ್ರೀತ್ವದ ಗುಣಗಳು. ಹಾಗಾಗಿಯೇ ಅವರ ಸತಿಪತಿಭಾವದ ವಚನಗಳು ಕಾಂತಿಯ ತೋರಣಗಳಾಗಿ ಕಂಡುಬರುತ್ತವೆ.

ಕವಿಚರಿತೆಕಾರರು 1170ರಲ್ಲಿ ಇದ್ದಿರಬಹುದೆಂದು ಕಾಲ ನಿರ್ಣಯಿಸಿರುವ **ಉರಿಲಿಂಗದೇವರು** "ಸತಿಪತಿಭಾವ"ದ ವಚನಗಳನ್ನು ಬರೆದಿರುವ ಮತ್ತೋರ್ವ ವಚನಕಾರರು. 'ಉರಿಲಿಂಗದೇವ' ಎಂಬುದು ಅವರ ಅಂಕಿತ.

ಉರಿಲಿಂಗದೇವರ 48 ವಚನಗಳು ಲಭ್ಯವಿವೆ. ಹೆಚ್ಚು ಕಡಿಮೆ ಎಲ್ಲ ವಚನಗಳೂ 'ಸತಿಪತಿಭಾವ'ವನ್ನೇ ಅಭಿವ್ಯಕ್ತಿಸುತ್ತಿರುವ, ಆರ್ದ್ರ ಮತ್ತು ಮಧುರ ಭಾವನೆಗಳಿಂದ ಕೂಡಿರುವ ವಚನಗಳೇ ಆಗಿವೆ. ಉರಿಲಿಂಗದೇವರು ತಮ್ಮ ಲಿಂಗಪತಿಯನ್ನು ನಲ್ಲ, ಇನಿಯ ಎಂಬಿತ್ಯಾದಿ ಮಧುರ ಸಂಬೋಧನೆಗಳಿಂದ ಕರೆಯುತ್ತಾರೆ. ತಮ್ಮ ತಲ್ಲಣ, ಕಳವಳ, ಸುಖ, ಸಂತೋಷಗಳನ್ನು ಗೆಳತಿಯರಿಗೆ ತಮ್ಮ ತಲ್ಲಣ, ಕಳವಳ, ಸುಖ, ಸಂತೋಷಗಳನ್ನು ಗೆಳತಿಯರಿಗೆ ಹೇಳುವಾಗ ಕೆಳದಿಯೇ, ಗೆಳತಿಯೇ ಎಂದು ಸಂಬೋಧಿಸುತ್ತಾ ಹೇಳುವುದೂ ಇವರ ವಚನಗಳಲ್ಲಿ ಒಂದು ಬಗೆಯ ಕೋಮಲತೆ ಮೂಡಲು ಕಾರಣವಾಗಿದೆ. ಉರಿಲಿಂಗದೇವರು ಇತರ ವಚನಕಾರರಂತೆಯೇ ತಮ್ಮ ಲಿಂಗಪತಿಯ ಪರಿ, ವಿರಹ, ಮಿಲನ, ಅರ್ಪಣೆ, ಏಕತ್ವ ಇತ್ಯಾದಿಗಳನ್ನು ಕುರಿತು ಮಾತನಾಡುತ್ತಾ ಹೋಗುತ್ತಾರೆ.

"ಒಬ್ಬನೆ ಗರುವನಿವ, ಒಬ್ಬನೆ ಚೆಲುವನಿವ, ಒಬ್ಬನೆ ಧನಪತಿ" ಸಹ. ಅವನಿಗಿಂತ ಹಿರಿಯರಾರೂ, ಒಡೆಯರಾರೂ ಇಲ್ಲ. ಇರಲು ಸಾಧ್ಯವೂ ಇಲ್ಲ. "ಕಾಮನ ಕೊಂದು ಪಟ್ಟಕ್ಕೆ ನಿಂದ ಕಾಮರಾಜ ರಾಜನು, ರಾಜಾಧಿರಾಜನು, ಗಂಡರನೆಲ್ಲರ ಹೆಂಡರ ಮಾಡಿ ನೆರೆವ ವೈಶಿಕ"ನು ಈತ. ಇಂತಹ ನಲ್ಲ ಇರುವ ಆ ನನ್ನ ಸ್ಥಳವಾದರೂ ಯಾವುದು?

ಮಾನಸದಲ್ಲಿಪ್ಪನು, ಬುದ್ಧಿಯಲ್ಲಿಗೆ ಹೋಹನು
ಚಿತ್ರದಲ್ಲಿ ನೆಲೆ ಎಮ್ಮ ನಲ್ಲಗೆ, ಕೇಳವ್ವಾ ಕೆಳದಿ
ಅಹಂಕಾರ ಕೂಡಿ ಅಹಂಕಾರದ ನಲ್ಲನ ಪರಿಕರ

ವಿಪರೀತ ಅಹಂಕಾರ...

ಭಕ್ತಿಯೆಂಬುದು ಮನಸ್ಸಿಗೆ ಸಂಬಂಧಿಸಿದ್ದು, ಬುದ್ಧಿಗಲ್ಲ ಎಂಬ ಅರಿವು ಶರಣಸತಿಯದು. ಹಾಗಾಗಿ ಲಿಂಗಪತಿಯ ಸ್ಥಳ ಮನಸ್ಸು, ಚಿತ್ತ ಎಂದು ಗುರುತಿಸಿಕೊಂಡಿದ್ದಾಳೆ.

ಕಾಯಕ್ಕೆ ಕಾಯವಾಗಿ ಪ್ರಾಣಕ್ಕೆ ಪ್ರಾಣವಾಗಿ

ಮನಕ್ಕೆ ಮನವಾಗಿ ನೆರೆವ ನೋಡಲಗವ್ವಾ

ನಲ್ಲನ ಬೇಟದ ಕೂಟದ ಸುಖವನೇನೆಂದು ಬಣ್ಣಿಪೆ, ಮಹಾಸುಖವ!

ನಲ್ಲನ ನೋಟದ ಕೂಟದನುವನೇನೆಂದುಪಮಿಸುವೆ, ಮಹಾಘನವ!

ತಾನು ತಾನೆಂದು ವಿವರಿಸಬಾರದಂತೆ

ನೆರೆದನು ನೋಡಾ ಉರಿಲಿಂಗದೇವರು

ಇಲ್ಲಿನ ಶರಣಸತಿ, ಲಿಂಗಪತಿಯರ ಕೂಟ ಕೇವಲ ದೈಹಿಕ ಕೂಟವಲ್ಲ. ಕಾಯ, ಪ್ರಾಣ, ಮನ–ಈ ಮೂರನ್ನೂ ಒಳಗೊಂಡ ಕೂಟ. ಶರಣಸತಿಯ ಕಾಯ, ಪ್ರಾಣ, ಮನಗಳಿಗೆ ಲಿಂಗಪತಿ ತಾನೇ ಕಾಯ, ಪ್ರಾಣ, ಮನಗಳಾಗಿ ಕೂಡುತ್ತಾನೆ. ಅಂತಹ ಕೂಟದ ಸುಖವನ್ನು ಬಣ್ಣಿಸಲು, ಉಪಮಿಸಲು ಅವಳಿಗೆ ಸಾಧ್ಯವಾಗುತ್ತಿಲ್ಲ. ಆ ಕೂಟ ಅವಳಗೆ ಮಹಾಸುಖವಾಗಿದೆ, 'ಮಹಾಘನ'ವಾಗಿದೆ. ಅಂತಹ ಉತ್ಕಟ ಸುಖವನ್ನು ನೀಡುವ ಲಿಂಗಪತಿಯನ್ನು ಕೂಡಿದ ಶರಣಸತಿ ತನ್ನ ಗೆಳತಿಯರಿಂದ ಪಾರಾಗಲು ಹುಡುಕಿಕೊಂಡ ದಾರಿ ಜಾಣತನದ್ದು.

ಹೀಗೆ ಉರಿಲಿಂಗದೇವರ ಒಟ್ಟು ವಚನಗಳಲ್ಲಿ ಕೆಲವೇ ಕೆಲವು ವಚನಗಳನ್ನು ಬಿಟ್ಟರೆ ಉಳಿದವುಗಳೆಲ್ಲ ಅಖಂಡವಾಗಿ ಶರಣಸತಿ ಲಿಂಗಪತಿ ಭಾವವನ್ನೇ ಸಮೃದ್ಧವಾಗಿ ಒಳಗೊಂಡಿವೆ. ಆ ಭಾವ ಉರಿಲಿಂಗದೇವರಲ್ಲಿ ಎಷ್ಟು ತೀವ್ರವಾಗಿದೆಯೆಂದರೆ ಒಂದೇ ಭಾವವನ್ನು ಮತ್ತೆ ಮತ್ತೆ ಪುನರಾವರ್ತಿಸಿದ ಅನುಭವಕ್ಕೆ ಓದುಗರು ಒಳಗಾಗುವಷ್ಟರ ಮಟ್ಟಿಗೆ ಒಂದು ವಚನದಂತೆಯೇ ಮತ್ತೊಂದು ವಚನ ಕಂಡುಬರುತ್ತವೆ. ಹಾಗೆಂದು 'ಪುನರಾವರ್ತನೆ' ಉರಿಲಿಂಗದೇವರ ವಚನಗಳ ಪರಿಮಿತಿಯಾಗಿಯೇನೂ ಉಳಿಯುವುದಿಲ್ಲ. ಪುನರಾವರ್ತನೆಯೂ ಉರಿಲಿಂಗ ದೇವರ ವಚನಗಳ 'ಧ್ವನಿ'ಯನ್ನು ವಿಸ್ತರಿಸುವ ಸಾಧ್ಯತೆಯನ್ನೂ ನಾವು ಗಮನಿಸಬೇಕಾಗುತ್ತದೆ. ಏನೆಂದರೆ ಉರಿಲಿಂಗದೇವರ ವಚನಗಳ ವಸ್ತು ಜಗತ್ತನ್ನು ಅವರಿಸಿರುವ 'ಪ್ರೀತಿ'ಯೇ ಆಗಿದೆ. ಆ ಪ್ರೀತಿ ಅಕ್ಕಮಹಾದೇವಿ ಚೆನ್ನನಲ್ಲಿ ಮಾಡಿದ 'ಪ್ರೀತಿ'ಯೊಂದಿಗೆ ಹೋಲಿಕೆ ಹೊಂದಿದೆ.

**ಉಪಸಂಹಾರ**

ಸತಿಪತಿಭಾವ ಹನ್ನೆರಡನೆಯ ಶತಮಾನದ ಶರಣ ಸಂಸ್ಕೃತಿಯಲ್ಲಿ ಭಕ್ತಿಯ ಒಂದು ವಿಶಿಷ್ಟ ಭಾವವಾಗಿ ತೆರೆದುಕೊಂಡಿದೆ. ಆ ಭಾವದಲ್ಲಿಯೇ ಸಾಧನೆಯ ತುರೀಯಾವಸ್ಥೆ ಮುಟ್ಟಿದ ಅಕ್ಕಮಹಾದೇವಿ,

ಬೊಂತಾದೇವಿ, ಗೊಗ್ಗವ್ವೆಯರಂತಹ ಶರಣೆಯರನ್ನು ನೋಡುತ್ತೇವೆ. ಚೆನ್ನಮಲ್ಲಿಕಾರ್ಜುನನನ್ನೇ ತನ್ನ ಗಂಡನನ್ನಾಗಿಸಿಕೊಂಡು 'ಲೋಕದ ಗಂಡರನ್ನು ಒಲೆಯೊಳಗಿಕ್ಕು' ಎಂದ ಅಕ್ಕ ಸತಿಪತಿ ಭಾವಕ್ಕೆ ಔನ್ನತ್ಯ ತಂದುಕೊಟ್ಟವಳು. ಆ ಭಾವವನ್ನೇ ಸ್ಥಾಯಿಯಾಗಿ ಹೊಂದಿದ ಹಲವು ವಚನಗಳು ಆ ಔನ್ನತ್ಯವನ್ನು ನಮಗೆ ತಲುಪಿಸುವ ಸಾಧನಗಳಾಗಿ ನಮ್ಮ ಮುಂದಿವೆ. ಶಿವನನ್ನೇ ಪತಿಯೆಂದು ಭಾವಿಸಿ ಬೊಂತಾದೇವಿ, ಗೊಗ್ಗವ್ವೆಯಂತಹ ಶರಣೆಯರು ಭಕ್ತಿಯ ಜೀವನ ನಡೆಸಿದ್ದನ್ನು ಇತಿಹಾಸದಲ್ಲಿ ನೋಡುತ್ತೇವೆ.

'ಶರಣಸತಿ ಲಿಂಗಪತಿ ಭಾವ' ಶರಣಸ್ಥಲದಲ್ಲಿ ನಿಂತ ಸಾಧಕನಲ್ಲಿ ತೋರುವ ಒಂದು ವಿಶಿಷ್ಟ ಲಿಂಗವಿಕಳಾವಸ್ಥೆ. ಆಗ ಶರಣ ತಾನು ಸತಿಯಾಗಿ ಲಿಂಗವನ್ನೇ ಪತಿಯೆಂದು ಭಾವಿಸಿ, ಲೌಕಿಕ ಸತಿಯರು ಅಗಲಿದ ಪತಿಯನ್ನು ಸೇರಲು ಹಲುಬಿ ಹಂಬಲಿಸುವ ರೀತಿಯಲ್ಲಿಯೇ ವಿರಹ, ಹುಸಿಕೋಪ, ತಾಪ, ಮುನಿಸು, ಮೂದಲಿಕೆಗಳನ್ನು ಪ್ರಕಟಿಸುತ್ತಾನೆ. ಪತಿ ಬಂದು ಬೆರೆತಾಗ ಆಗುವ ಆನಂದ, ಪುಳಕ, ಸುಖಾತಿಶಯಗಳನ್ನೆಲ್ಲಾ ಲೌಕಿಕ ಸತಿ ಅನುಭವಿಸಿ ಅನುರಕ್ತಿ ಪಡುವಂತೆ, ಶರಣಸತಿಯೂ ಆನಂದಿಸುತ್ತಾಳೆ. ಆದರೆ ಇಷ್ಟು ಮಾತ್ರ ವ್ಯತ್ಯಾಸ; ಲೌಕಿಕಪತಿ ಸಾಕಾರನಾದರೆ, ಲಿಂಗಪತಿ ನಿರಾಕಾರ. ಒಂದು ಸುಖವನ್ನು ವರ್ಣಿಸಬಹುದು, ನೆನೆಯಬಹುದು. ಇನ್ನೊಂದನ್ನು ವರ್ಣಿಸಲೂ ಬಾರದು, ನೆನೆಯಲೂಬಾರದು. ಅದು ಅವ್ಯಕ್ತ, ಅನುಭವಗಮ್ಯ. ಇಂಥ ಲಿಂಗಪತಿಯನ್ನು ಬೆರೆತು ಸಮರಸಾನಂದ ಸುಖವನ್ನು ಅನುಭವಿಸಿದ ಶರಣರು ಅದನ್ನು ತಮ್ಮ ವಚನಗಳಲ್ಲಿ ಭಾವಗರ್ಭಿತ ಸುಕೋಮಲ ಮಧುರೋಕ್ತಿಗಳಿಂದ ಅಭಿವ್ಯಕ್ತಿಸಿದ್ದಾರೆ.

## ಪರಾಮರ್ಶನ ಗ್ರಂಥಗಳು


1. ಚಿದಾನಂದಮೂರ್ತಿ ಎಂ.: ವಚನ ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು, 2009.
2. (ಸಂ.) ಶಿ. ಭೂಸನೂರಮಠ : ವಚನ ಸಾಹಿತ್ಯ ಸಂಗ್ರಹ, ಮೈಸೂರು ಸರ್ಕಾರ –ವಿದ್ಯಾಭ್ಯಾಸ ಇಲಾಖೆ (ಸಾಹಿತ್ಯ–ಸಂಸ್ಕೃತಿ ಅಭಿವೃದ್ಧಿ ಶಾಖೆ), 1965.
3. ಎಂ.ಆರ್. ಶ್ರೀನಿವಾಸಮೂರ್ತಿ, ವಚನಧರ್ಮ ಸಾರ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, 1968.
4. (ಸಂ.) ಡಾ. ವೀರಣ್ಣ ರಾಜೂರ, ಸಂಕೀರ್ಣ ವಚನ ಸಂಪುಟ 7, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು
5. ಸಮಗ್ರ ವಚನ ಸಂಪುಟಗಳು. ಜನಪ್ರಿಯ ಆವೃತ್ತಿ, ಪ್ರಥಮ ಮುದ್ರಣ, 1993, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
6. ಫ.ಗು. ಹಳಕಟ್ಟಿ, ಶಿವಶರಣರ ಸಂಕೀರ್ಣ ವಚನಗಳು 1, ಸಾಹಿತ್ಯ ಭಂಡಾರ, 1940.
7. ಫ.ಗು. ಹಳಕಟ್ಟಿ, ವಚನಶಾಸ್ತ್ರ ಸಾರ (ಸಂಪುಟ – 1), ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ, 1982.